ದಿನಾಂಕ 14-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 1,3 ಮತ್ತು 4 ಆರೋಪಿತರ ಪರ ಶ್ರೀ.ಎಂ.ಎಸ್.ಕೆ. ವಕೀಲರಿಂದಃ**

ಫಿರ್ಯಾದಿ ನನಗೆ ಸಂಬಂಧಿಕರಲ್ಲ. ನಾನು ಬಿ.ಸಿ.ರೋಡ್ ವಾಸಿ. ನಾನು ಅಟೋ ಚಾಲಕ. ನನ್ನ ಅಟೋ ದ ನಂಬರ್ ಕೆಎ-19-ಎಎ-5616 ಆಗಿರುತ್ತದೆ. ನಾನು ಬೊಳ್ಳಿಂಬಳ ಮನೆಯ ಖಾದರ್ ರವರಿಗೆ ಪಾರ್ಸಲ್ ಕೊಡಲು ಘಟನಾ ದಿನ ಬಂದಿದ್ದೆನು. ನಾನು ಪಾರ್ಸಲ್ ಕೊಡಲು ಬಂದಿದ್ದ ಮನೆಗೂ ಹಾಗೂ ಫಿರ್ಯಾದಿಯ ಜಾಗಕ್ಕೂ ಕಾಲು ಕಿ.ಮೀ ದೂರ ಇತ್ತು. ನಾನು ಪಾಣಾಜೆ-ಆರ್ಲಪದವು ಮಾರ್ಗದಲ್ಲಿ ಪಾರ್ಸಲ್ ಕೊಡಲು ಬಂದಿದ್ದೆ. ಖಾದರ್ ವಾಸಿಸುವ ಜಾಗದ ನಿರ್ದಿಷ್ಟ ಹೆಸರು ನನಗೆ ಗೊತ್ತಿಲ್ಲ.

2. ಘಟನೆ ನಡೆದದ್ದನ್ನು ನಾನು ನೋಡಿದ್ದೇನೆ. ಘಟನಾ ಸ್ಥಳಕ್ಕೆ ಹೋಗುವ ದಾರಿಯಲ್ಲಿ ಬರುವ ಊರುಗಳ ಹೆಸರು ಗೊತ್ತಿಲ್ಲ. ಘಟನೆ ನಡೆದ ಸ್ಥಳದ ಸುತ್ತಮುತ್ತ ತೋಟ ಹಾಗೂ ನೀರು ಹೋಗುವ ತೋಡು ಇತ್ತು. ಸ್ಥಳದ ಹತ್ತಿರ ಮನೆಗಳು ಇರಲಿಲ್ಲ. ಘಟನೆ ನಡೆದ ಸ್ಥಳದ ಚೆಕ್ ಬಂಧಿ ಈಗ ಹೇಳಲು ಆಗುವುದಿಲ್ಲ. ಘಟನೆಯನ್ನು ನಾನು ಮಾತ್ರ ನೋಡಿದ್ದೇನೆ. ನಾನು ಪ್ರಥಮವಾಗಿ ನೋಡಿದಾಗ ಫಿರ್ಯಾದಿ ಅಬ್ದುಲ್ ಅಜೀಜ್ , ಸಫಿಯಾ ಹಾಗೂ ರಜಾಕ್ ರವರ ಜೊತೆ ಮಾತನಾಡುತ್ತಿದ್ದರು. ಇನ್ನು ಇಬ್ಬರ ಹೆಸರು ನನಗೆ ಗೊತ್ತಿಲ್ಲ. ನನಗೆ ಘಟನಾ ಸ್ಥಳದಲ್ಲಿ ಯಾರ ಪರಿಚಯವೂ ಇರುವುದಿಲ್ಲ. ಘಟನಾ ಸ್ಥಳದಿಂದ ಫಿರ್ಯಾದಿಯನ್ನು ನಾನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೇನೆ. ಘಟನೆ ನಡೆದ ಸ್ಥಳದಲ್ಲಿನ ರಸ್ತೆ ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ಸ್ಥಳದಲ್ಲಿ ಫಿರ್ಯಾದಿಗೆ ಸೇರಿದ ಜಾಗ ಯಾವುದು ಹಾಗೂ ಆರೋಪಿಗಳಿಗೆ ಸೇರಿದ ಜಾಗ ಯಾವುದು ಎಂದು ನನಗೆ ಗೊತ್ತಿಲ್ಲ. ನಾನು ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ಆದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಊರಿನವನು ಅಲ್ಲ ಮತ್ತು ಘಟನಾ ಸ್ಥಳದಲ್ಲಿ ಯಾರ ಪರಿಚಯವೂ ಇಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ಮತ್ತು 5ನೇ ಆರೋಪಿತರ ಪರ ವಕೀಲರಿಂದಃ**

1 , 3 ಮತ್ತು 4ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ, ಹೇ, ಕೇ, ಸರಿ ಇದೆ.

C.C.406/2023

1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಢಾಧಿಕಾರಿ, ಪುತ್ತೂರು ದ.ಕ.